

ಎಂ.ಆರ್. ದತ್ತಾತ್ರಿ

# ಯುಗಸಂಧಿಕಾಲದ ಕಥೆಗಾರ

ಎಸ್.ಎಲ್. ಭೈರಪ್ಪನವರು ಒಬ್ಬ ಕಥೆಗಾರರಾಗಿ ಅಲ್ಲ, ಕಥೆಯೊಂದರ ಪಾತ್ರದಂತೆ ನನಗೆ ಮೊದಲು ಪರಿಚಯವಾದವರು.

ಇವೆಲ್ಲ ಎಪ್ಪತ್ತರ ದಶಕದ ಕೊನೆಯ ವರ್ಷಗಳ ಮಾತುಗಳು. ಭೈರಪ್ಪನವರ ತಂಗಿ ಲಲಿತಮ್ಮ ನನ್ನ ತಾಯಿಗೆ ಆಪ್ತ ಗೆಳತಿಯಾಗಿದ್ದರು. ಲಲಿತಮ್ಮನವರು ನನ್ನೂರಿನ ಹತ್ತಿರದೂರಿಗೆ ಸೊಸೆಯಾಗಿ ಬಂದವರು. ನನ್ನ ತಾಯಿಗಿಂತ ಒಂದೆರಡು ವರ್ಷಗಳಿಗೆ ದೊಡ್ಡವರಿದ್ದರೇನೋ. ಅನೇಕ ದೌರ್ಭಾಗ್ಯಗಳು ಅವರ ಬದುಕಿನಲ್ಲಿ ಘಟಿಸಿ, ಮುಂದೆ ಅವರು ಒಬ್ಬಂಟಿಯಾಗಿ ಎರಡು ಮಕ್ಕಳೊಂದಿಗೆ ಚಿಕ್ಕಮಗಳೂರಿನಲ್ಲಿ ನೆಲೆಸಿ, ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅದೇ ದಿನಗಳಲ್ಲಿ ನನ್ನ ತಂದೆ, ತಾಯಿ ಕೂಡ ಚಿಕ್ಕವರಾಗಿದ್ದ ನಾನು ಮತ್ತು ನನ್ನ ಅಕ್ಕನೊಂದಿಗೆ ಚಿಕ್ಕಮಗಳೂರಿಗೆ ವರ್ಗಾವಣೆಗೊಂಡು ಮುಂದೆ ಅಲ್ಲಿಯೇ ನೆಲೆಸಿದರು. ನನ್ನ ತಂದೆಯು ಶಾಲೆಯೊಂದರಲ್ಲಿ ಉಪಾಧ್ಯಾಯರಾಗಿದ್ದರು. ಲಲಿತಮ್ಮ ಆಗಾಗ ತಮ್ಮ ಸ್ನೇಹಿತೆಯಾದ ನನ್ನ ತಾಯಿಯನ್ನು ಹುಡುಕಿ ಬಂದು ಭೇಟಿ ಮಾಡಿ ಹರಟುತ್ತಿದ್ದರು. ನನ್ನ ತಾಯಿಯು ಅಡುಗೆಮನೆಯಲ್ಲಿ ಕೆಲಸ ಮಾಡಿಕೊಳ್ಳುವಾಗ ಅಲ್ಲಿಯೇ ಕೈಚಾಪೆಯ ಮೇಲೆ ಕುಳಿತು ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುತ್ತಿದ್ದರು. ಭೈರಪ್ಪನವರ ಮಾತುಗಳಲ್ಲಿ ದಟ್ಟವಾಗಿ ಬರುತ್ತಿದ್ದ ತಿಪಟೂರು–ಚನ್ನರಾಯಪಟ್ಟಣ ಸೀಮೆಯ ಉಚ್ಚಾರಣೆಯು ಅವರ ತಂಗಿಯಲ್ಲಿಯೂ ಸಹಜವಾಗಿತ್ತು. ಅವರದ್ದು ಇನ್ನೂ ಎತ್ತರದ ದನಿ. ಪ್ರೈಮರಿ ಶಾಲೆ ಓದುವ ಹುಡುಗನಾಗಿದ್ದ ನಾನು ಅಲ್ಲೆಲ್ಲೋ ಸಂಚಿನಲ್ಲಿ ಅವರಿಬ್ಬರ ಮಾತುಗಳನ್ನು ಕೇಳುತ್ತಿದ್ದೆ. ಎಸ್.ಎಲ್. ಭೈರಪ್ಪನವರು ತಮ್ಮ ಬಾಲ್ಯದ ದಿನಗಳಲ್ಲಿ ಅನುಭವಿಸಿದ್ದ ಕಷ್ಟಗಳು, ಕಂಡ ಸಾವುಗಳು, ಹಸಿವು, ಬಡತನ, ತಂದೆ–ಚಿಕ್ಕಪ್ಪ–ಅಜ್ಜಿಯ ಮತಿಹೀನತೆ, ಸೋದರಮಾವನ ದುಷ್ಟತನ ಮುಂತಾದವು ಅವರ ಆತ್ಮಕಥೆ